ಶ್ರೀ ಎಂ.ಪಿ. ಪ್ರಕಾಶ್ : ಈಗ ನಡೆಸತಕ್ಕಂಥ ಕಾರ್ಯಗಳ ಬಗ್ಗೆ ನೀವು ಸಮಜಾಯಿಷಿಯನ್ನು ಕೊಡಬೇಕು ಎನ್ನುವ ಪ್ರಶ್ನೆ ಬಂದ ತಕ್ಷಣವೇ ಅವರಿಂದ ಉತ್ತರವನ್ನು ತರಿಸಿಕೊಳ್ಳುತ್ತೇವೆ. 2 ದಿವಸಗಳೊಳಗಾಗಿ ಖಂಡಿತವಾಗಿಯೂ ನಾವು ಉತ್ತರ ಕೊಡುವುದರ ಜೊತೆಗೆ ಕಾನೂನು ಬಾಹಿರವಾದಂಥ ಚಟುವಟಿಕೆ ನಡೆದಿದ್ದರೆ, ಅದನ್ನು ನಿಲ್ಲಿಸುತ್ತೇನೆ. ಆದ್ದರಿಂದ ದಯಮಾಡಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ....

ಅಧ್ಯಕ್ಷರು : ಡಾ|| ಕರ್ಕಿಯವರೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡುತ್ತೇನೆ. ತಾವು ಎತ್ತಿದ ಮಹತ್ವದ ಪ್ರಶ್ನೆಗೆ ಸಂಬಂಧಪಟ್ಟಂತೆ ಸರ್ಕಾರ ನಾಳೆ, ನಾಡಿದ್ದರೊಳಗೆ ಇದನ್ನು ನಿಲ್ಲಿಸಬೇಕೆಂದು ತೀರ್ಮಾನ ತೆಗೆದುಕೊಂಡರೆ, ಈ 2 ದಿವಸಗಳ ಅವಧಿಯೊಳಗೆ ತೆಗೆದಿರತಕ್ಕಂಥದ್ದಕ್ಕೆ ಯಾರು ಹೊಣೆ ಎನ್ನುವ ಪ್ರಶ್ನೆಯನ್ನೂ ಒಳಗೊಂಡಂತೆ ನಾವು ನಾಡಿದ್ದು ಚರ್ಚೆ ಮಾಡೋಣ. ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ. ದಯವಿಟ್ಟು ಸಹಕರಿಸಿ.

ಸಕಲೇಶಪುರ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದು.

144 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಆರೋಗ್ಯ ಮತ್ತು ಕುಕು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸಕಲೇಶಪುರದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆಯೇ?*

2) *ಹಾಗಿದ್ದಲ್ಲಿ ಎಷ್ಟು ಹಾಸಿಗೆಗೆ ಹೆಚ್ಚಿಸಲಾಗುತ್ತಿದೆ?*

3) *ಯಾವಾಗ ಈ ಕಾರ್ಯ ಪ್ರಾರಂಭ ಮಾಡಲಾಗುವುದು?*

4) *ಈ ಆಸ್ಪತ್ರೆಯಲ್ಲಿ ಸರಿಯಾದ ನೀರಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಬರದಿದ್ದಲ್ಲಿ ನಿವಾರಿಸಲು ತೆಗೆದುಕೊಳ್ಳುವ ಕ್ರಮಗಳೇನು?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಸರ್ಕಾರದ ಪರಿಶೀಲನೆಯಲ್ಲಿದೆ.

2) 133 ಹಾಸಿಗೆಗಳಿಂದ 150 ಹಾಸಿಗೆಗಳಿಗೆ.

3) ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಯಡಿಯ ಕಾರ್ಯಕ್ರಮ 4ನೇ ಹಂತದಲ್ಲಿ.

4) ಬಂದಿದೆ.

5) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಸಕಲೇಶಪುರ ಸರ್ಕಾರಿ ಆಸ್ಪತ್ರೆಯನ್ನು 133 ಹಾಸಿಗೆಗಳಿಂದ 150 ಹಾಸಿಗೆಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಅಂದರೆ, ಕೇವಲ 17 ಹಾಸಿಗೆಗಳನ್ನು ಹೆಚ್ಚಿಸುವ ಕೆಲಸವನ್ನು 4 ನೇ ಹಂತದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ, 4ನೇ ಹಂತ ಎಂದರೆ ಎಷ್ಟು ಮುಂದೆ ಹೋಗಬಹುದು? ಯಾವಾಗ ಎಂಬುದನ್ನು ದಯಮಾಡಿ ತಿಳಿಸಬೇಕು. ನಂತರ, ಈ ಆಸ್ಪತ್ರೆಯ ಕಟ್ಟಡವನ್ನು ಯಾರೋ ಪುಣ್ಯಾತ್ಮರು ಮುಫತ್ತಾಗಿ ಕಟ್ಟಿಸಿಕೊಟ್ಟಂಥದ್ದು, ಅತ್ಯುತ್ತಮವಾಗಿರತಕ್ಕಂಥ ಕಟ್ಟಡವನ್ನು ರಿಪೇರಿ ಮಾಡಲಿಕ್ಕೆ ಕೂಡ ತಮ್ಮ ಕೈಯಲ್ಲಿ ಸಾಧ್ಯವಾಗುತ್ತಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಅಲ್ಲಿಗೆ ನೀರನ್ನೊದಗಿಸುವ ಬಗ್ಗೆ ತಾವು ಜಿಲ್ಲಾ ಪಂಚಾಯತ್‌ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಿದ್ದೇವೆಂದು ಹೇಳುತ್ತಿದ್ದೀರಿ. ಆದರೆ, ಇದುವರೆಗೂ ಅದು ಆಗಲಿಲ್ಲ. ನಾವೂ ಕೂಡ ಸಾಕಷ್ಟು ಹೋರಾಟ ಮಾಡಿ ಆ ಸುತ್ತಮುತ್ತಲಿನಲ್ಲಿ ಎಲ್ಲೂ ನೀರು ಇಲ್ಲದೇ ಇದ್ದುದರಿಂದ ಒಂದು ಬೋರ್ ಹಾಕಿಸಿದೆವು. ಅದು ಆಗುವುದಿಲ್ಲ. ಅದಕ್ಕೆ ಒಂದು ಹ್ಯಾಂಡಪಂಪ್ ಹಾಕಿದ್ದಾರೆ. ಇವತ್ತು ಆ ಪೇಷೆಂಟ್ಸ್ ಜೊತೆ ಬಂದಂತ ಜನ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ನಾನು ಮಂತ್ರಿಗಳಲ್ಲಿ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಮ್ಮಿಂದ ನೇರವಾಗಿ ಏನಾದರೂ ತಮ್ಮ ವಿವೇಚನಾ ನಿಧಿಯಿಂದ 4-5-ಲಕ್ಷ ರೂ.ಕೊಡುವುದಾದರೆ, ಮುನಸಿಪಲ್ ಟ್ಯಾಂಕ್ ನೇರವಾಗಿ ಪೈಪ್‌ಹಾಕಲಿಕ್ಕೆ ಅವಕಾಶ ವ್ಯವಸ್ಥೆ ಇದೆ. ಇದಕ್ಕೆ ಅಲ್ಲಿನ ಮುನಿಸಿಪಲ್‌ರವರೂ ಒಪ್ಪಿಕೊಂಡಿದ್ದಾರೆ. ನೀರಿನ ಸಮಸ್ಯೆ ಬಗೆಹರಿದರೆ, ಆಸ್ಪತ್ರೆಯ ಬಹು ಭಾಗ ಕಾರ್ಯನಿರ್ವಹಣೆ ಮಾಡಿದ ಹಾಗಾಗುತ್ತದೆ. ಅದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡಬೇಕೆಂದು ಹೇಳುತ್ತೇನೆ ಮತ್ತು ಈ 4ನೇ ಹಂತ ಯಾವಾಗ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯು ಜಿಲ್ಲಾ ಪಂಚಾಯತ್ ಕಾರ್ಯ ವ್ಯಾಪ್ತಿಗೆ ಬರುತ್ತದೆ. 133 ಹಾಸಿಗೆಗಳಿಂದ 150 ಹಾಸಿಗೆಗೆ ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಮೇಲ್ದರ್ಜೆಗೇರಿಸುವುದಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇನೆ. 4ನೇ ಹಂತದ ಯೋಜನೆಯು ಇನ್ನು 2 ವರ್ಷಗಳಲ್ಲಿ ಪ್ರಾರಂಭವಾಗುತ್ತದೆ.1 ಮತ್ತು 2ನೇ ಹಂತ ಎರಡೂ ಒಂದೇ ಸಾರಿ ಪ್ರಾರಂಭವಾಗುತ್ತದೆ. 3-4ನೇ ಹಂತ ಒಂದು ಹಂತದಲ್ಲಿ ಪ್ರಾರಂಭವಾಗುತ್ತದೆ. ಸುಮಾರು ಒಂದೂವರೆ ಕೋಟಿಯಷ್ಟು ಅಂದಾಜಿನ ಕಾಮಗಾರಿಗಳು, ದುರಸ್ಥಿ, ಯಂತ್ರೋಪಕರಣಗಳನ್ನು ಈ ಆಸ್ಪತ್ರೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಈ ಆಸ್ಪತ್ರೆ ಬರುವುದರಿಂದ, ದಿ:22-1-87ರಲ್ಲಿ ಹಾಸನದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ ಬರೆದು ಕುಡಿಯುವ ನೀರಿನ ವ್ಯವಸ್ಥೆಗೆ ಕ್ರಮ ತೆಗೆದುಕೊಳ್ಳಬೇಕೆಂದು

ಹೇಳಿದ್ದಾರೆ. ನಾನು ಒಂದು ಸಾರಿ ಖಿದ್ದಾಗಿ ಮಾತನಾಡುತ್ತೇನೆ. ಅವರು ಮಾಡದೇ ಇದ್ದಂಥ ಸಂದರ್ಭದಲ್ಲಿ ತಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ನನ್ನ ಕಾರ್ಯ ವ್ಯಾಪ್ತಿಯಲ್ಲಿ ಏನಾದರೂ ನೀರಿನ ವ್ಯವಸ್ಥೆಯನ್ನು ಒದಗಿಸಲು ಪರಿಶೀಲನೆ ಮಾಡಿಕ್ರಮ ಕೈಗೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಈ 2 ತಿಂಗಳ ಅವಧಿಯನ್ನು ಬಿಟ್ಟರೆ, ಸಕಲೇಶಪುರ ಆಸ್ಪತ್ರೆಗೆ 6 ತಿಂಗಳ ಕಾಲ ನೀರಿನ ಅವಶ್ಯಕತೆಯಿಲ್ಲ. ಮಳೆ ನೀರೇ ಬರುತ್ತದೆ. ನೀವು ಏನಾದರೂ ಮಾಡುವುದಿದ್ದರೆ ಈ ತಿಂಗಳಲ್ಲೇ ಮಾಡಬೇಕು. ಹಾಗೆ ಮಾಡಿದರೆ ಅಲ್ಲಿನ ರೋಗಿಗಳಿಗೆ ಸ್ವಲ್ಪ ಉಪಕಾರವಾಗುತ್ತದೆ. ಇಲ್ಲದಿದ್ದರೆ, ಇನ್ನು 6 ತಿಂಗಳು ಅಂದರೆ ಸೆಪ್ಟೆಂಬರ್‌ವರೆಗೆ ಅದರ ಅವಶ್ಯಕತೆಯಿಲ್ಲ. ಆದ್ದರಿಂದ, ತಕ್ಷಣಕ್ಕೆ ತಾವು ಏನಾದರೂ ಮಾಡಲಿಕ್ಕೆ ಸಾಧ್ಯವಿದೆಯೇ?

ಡಾ|| ಹೆಚ್.ಸಿ. ಮಹದೇವಪ್ಪ : ತಮ್ಮ ಸಲಹೆಯನ್ನು ವಿಚಾರ ಮಾಡುತ್ತೇನೆ.

ಅರಕಲಗೂಡು ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮಗಳಲ್ಲಿ ಹಣ ದುರುಪಯೋಗ

145 - ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ತಾಲ್ಲೂಕು ಪಂಚಾಯಿತಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಜನತಾಮನೆ, ಶೌಚಾಲಯ, ನೆರಳು ಭಾಗ್ಯ, ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯಗಳಲ್ಲಿ ಹಣ ದುರಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಹಣ ದುರುಪಯೋಗದ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳು ಏನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹೌದು.

ಆ) ಈ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳಿಗೆ ಹಣದ ವಿತರಣೆ ಸರಿಯಾಗಿ ಮತ್ತು ಸರಿಯಾದ ಸಮಯದಲ್ಲಿ ಆಗದೇ ಇರುವ ಕುರಿತು ಬಂದ ದೂರಿನ ಮೇರೆಗೆ ಕಾಮಗಾರಿಗಳ ವಿಶೇಷ ಲೆಕ್ಕ ತನಿಖೆ ಕೈಗೊಂಡಾಗ ಆರೋಪವು ಮೇಲು ನೋಟಕ್ಕೆ ಸಾಬೀತಾಗಿರುವ ಕಾರಣ ವಿಚಾರಣೆ ಕಾದಿರಿಸಿ ಸಂಬಂಧಿಸಿದ ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿಡಲಾಗಿದೆ. ಎಲ್ಲಾ ಕಾಮಗಾರಿಗಳ ಸ್ಥಳ ತನಿಖೆ ಪೂರ್ಣಗೊಳ್ಳುವ ಹಂತದಲ್ಲಿದ್ದು, ತಪ್ಪಿತಸ್ಥರ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ಅರಕಲಗೂಡು ತಾಲ್ಲೂಕು ಪಂಚಾಯಿತಿ ವತಿಯಿಂದ ಜನತಾ ಮನೆ, ಶೌಚಾಲಯ, ನೆರಳು ಭಾಗ್ಯ ಮತ್ತು ಶಾಲಾ ಕೊಠಡಿಗಳ ನಿರ್ಮಾಣದ ಕಾರ್ಯಕ್ರಮಗಳನ್ನು ಏನು ಅನುಷ್ಠಾನ ಮಾಡುತ್ತಿದ್ದಾರೆ, ಅದರಲ್ಲಿ ಹಣ ದುರುಪಯೋಗವಾಗಿದೆ. ಅದರ ಬಗ್ಗೆ ಕ್ರಮ